## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ದಕ್ಷಿಣ

ಬೈರಸಂದ್ರ, ವಾರ್ಡ್ ಸಂಖ್ಯೆ: 169

ದಿನಾಂಕ: 05.07.2021 ರಂದು ವಾರ್ಡ್ ಸಂ: 169 ಬೈರಸಂದ್ರ ವಾರ್ಡ್‌ನಲ್ಲಿ ನಡೆದ ವಾರ್ಡ್ ಸಭೆ:

**ಸಮಿತಿ ಸಭೆಯ ನಡವಳಿಗಳು**

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು:-

| ಕ್ರಮ ಸಂಖ್ಯೆ | ಹೆಸರು | ಹುದ್ದೆ |
|---|---|---|
| 01 | ಶ್ರೀ ವಾಲೂ ರಾಥೋಡ್ | ಅಧ್ಯಕ್ಷರು |
| 02 | ಶ್ರೀ ವಿ ಚಂದ್ರಶೇಖರ್ | ಕಾರ್ಯದರ್ಶಿ ಮತ್ತು ಸಂಚಾಲಕರು |
| 04 | ಶ್ರೀ ಅಶೋಕ್.ಆರ್ | ಸಕಾನಿಅ, ಆರ್.ಐ.(ದಕ್ಷಿಣ) |
| 05 | ಶ್ರೀ ಎಸ್.ರಮೇಶ್ | ಕಿರಿಯ ಆರೋಗ್ಯ ಪರೀವಿಕ್ಷಕರು |
| 06 | ಶ್ರೀಮತಿ ಇ.ಕಾಂಚನ | ಸಕಂಅ(ಮಾರುಕಟ್ಟೆ) |
| 07 | ಶ್ರೀಮತಿ ಶಶಿಕಲಾ ಟಿ.ಜೆ | ಸಾಹಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ) |
| 08 | ಶ್ರೀ ಎಂ.ಮದೂಸುದನ್ | ಅಸೇಸರ್ |
| 09 | ಶ್ರೀ ಕಲ್ಲೇಶ್ | ನಾಗರೀಕರು |
| 10 | ಶ್ರೀ ಮುರಳೀಧರ್ | ಮೀಟರ್ ರೀಡೆರ್, ಬೆಂಗಳೂರು ಜಲಮಂಡಳಿ |
| 11 | ಶ್ರೀಮತಿ ಪ್ರೀತಿ | ತಿಲಕ್ ನಗರ ಮಹಿಳಾ ಸಂಘದ ಅಧ್ಯಕ್ಷರು |
| 12 | ಶ್ರೀ ಪರಮೇಶ್ವರನ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 13 | ಶ್ರೀ ಬಾಬು ರಾವ್ | ಎಲ್.ಐ.ಸಿ ಕಾಲೋನಿ ನಿವಾಸಿಗಳ ಸಂಘ |
| 14 | ಶ್ರೀ ಕೆ.ಭಾಸ್ಕರ್ ರೆಡ್ಡಿ | ನಾಗರೀಕರು |
| 15 | ಶ್ರೀ ಟಿ.ಕೆ.ಪರಮೇಶ್ವರನ್ | ನಾಗರೀಕರು |
| 16 | ಶ್ರೀಮತಿ ಕಾಳಮ್ಮ | ನಾಗರೀಕರು |
| 17 | ಶ್ರೀಮತಿ ಲಕ್ಷ್ಮೀ.ವೈ | ಬೈರಸಂದ್ರ ಮಹಿಳಾ ಸಂಘದ ಅಧ್ಯಕ್ಷರು |

ವಾರ್ಡ್: ಸಮಿತಿ ಅಧ್ಯಕ್ಷರು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಸ್ವಾಗತವನ್ನು ಕೋರುತ್ತಾ, ಸಭೆಯನ್ನು ಪ್ರಾರಂಭಿಸಿದರು:

1) ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ತಿಳಿಸಿದ ಸಾರ್ವಜನಿಕರು ಮತ್ತು ನೌಕರರು ತಿಳಿಸಿದ ಸಮಸ್ಯೆಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

2) ಶ್ರೀಮತಿ ಕಾಳಮ್ಮ ರವರು ಮಾತಾನಾಡಿ ನಕ್ಕಲು ಬಂಡೆ ಸ್ಲಂನಲ್ಲಿ ಕಳೆದ ಸಭೆಯಲ್ಲಿ ಈ ಹಿಂದಿನ ಸಭೆಯಲ್ಲಿ ತಿಳಿಸಿದ ಯಾವುದೆ ದೂರುಗಳು ಪರಿಹಾರ ಆಗಿಲ್ಲವೆಂದು ಸಬೆಗೆ ತಿಳಿಸಿದರು.

3) ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಅಧಿಕವಾಗಿ ಮಿಶ್ರಿತ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು ಅದನ್ನು ವಿಂಗಡಿಸಿ ಕೊಡುವಂತೆ ವ್ಯಾಪ್ಯಾರಿಗೆ ಅರಿವು ಮೂಡಿಸಲು ಕೋರಿದರು (ಕ್ರಮ: ಕಿ.ಆ.ಪ ಮತ್ತು ಸಾ.ಕಾನಿ.ಅ (ಘನತ್ಯಾಜ್ಯ)).

4) ಜಯನಗರ 3ನೇ ಬ್ಲಾಕ್, 9ನೇ ಮುಖ್ಯರಸ್ತೆ 27ನೇ ಅಡ್ಡರಸ್ತೆಗೆ ಸುಮಾರು 150 ಅಡಿಗಳಷ್ಟು ಉದ್ದದ ಒಳಚರಂಡಿ ಹಾಗೂ ನೀರಿನ ಪೈಪ್ ಅಳವಡಿಸಿಕೂಡುವ ಬಗ್ಗೆ, ಅಲ್ಲಿನ ನಿವಾಸಿಗಳು ಸಭೆಯನ್ನು ಕೋರಿರುತ್ತಾರೆ. (ಕ್ರಮ : ಸ.ಅ, ಜಲಮಂಡಳಿ).

5) ಬೈರಸಂದ್ರ 5ನೇ ಮುಖ್ಯರಸ್ತೆ ಮತ್ತು 2ನೇ ಅಡ್ಡರಸ್ತೆಯಲ್ಲಿನ ಖಾಲಿ ನಿವೇಶನಗಳನ್ನು ಶುಚಿಮಾಡಿದ್ದು ಅಲ್ಲಿ ಕಸ ಹಾಕದಂತೆ ನಾಮಫಲಕವನ್ನು ಹಾಕುವಂತೆ ಕೋರಿದರು. (ಕ್ರಮ: ಕಿ.ಆ.ಪ ಮತ್ತು ಸಾ.ಕಾನಿ.ಅ (ಘನತ್ಯಾಜ್ಯ)).

6) ಮದರ್ ಟಂಚ್ ಶಾಲೆಯ ಹತ್ತಿರ ರಸ್ತೆಯನ್ನು ರಿಪೇರಿ ಮಾಡಿಸಿಕೊಡುವಂತೆ ಶ್ರೀ ಟಿ.ಕೆ.ಪರೇಮೇಶ್ವರನ್ ರವರು ಕೋರಿರುತ್ತಾರೆ (ಕ್ರಮ ಸ.ಅ ಕಾಮಗಾರಿ ಇಲಾಖೆ).

7) ಬೃಹತಾಗಿ ಬೆಳೆದಿರುವ ಮರದ ಸುತ್ತಯಿರುವ ಟ್ರೀ ಗಾರ್ಡ್‌ಗಳನ್ನು ತೆರವುಗೊಳಿಸುವಂತೆ ಶ್ರೀ ಕಲ್ಲೇಶ್ ರವರು ಕೋರಿದರು.

8) ತಿಲಕ್ ಪೋಲೀಸ್ ಠಾಣೆಯ ಹತ್ತಿರ ನೀರಿನ ಪೈಪ್ ಒಡೆದು ನೀರು ಪೋಲಾಗುತ್ತಿರುವ ಬಗ್ಗೆ ಶ್ರೀಮತಿ ಲಕ್ಷ್ಮೀ ರವರು ಸಭೆಗೆ ತಿಳಿಸಿದರು. (ಕ್ರಮ ಸ.ಅ, ಜಲಮಂಡಳಿ).

9) ಎಲ್.ಐ.ಸಿ.ಕಾಲೋನಿ ಉದ್ಯಾನವನದಲ್ಲಿ ಕಾಮಗಾರಿಯ ಬಗ್ಗೆ ಶ್ರೀ ಬಾಬು ರಾವ್ ರವರು ಈ ಸಭೆಗೆ ತಿಳಿಸಿದರು (ಕ್ರಮ ಯೋಜನೆ-ದಕ್ಷಿಣ).

10) ಉದ್ಯಾನವನದಲ್ಲಿ ಒಣಗಿ ಉದುರುವ ಎಲೆಗಳನ್ನು ಸರಿಯಾಗಿ, ತೆರೆವುಗೊಳಿಸುತ್ತಿಲ್ಲವೇಂದು ಶ್ರೀಮತಿ ಶಶೀಕಲಾರವರು ಈ ಸಭೆಗೆ ತಿಳಿಸಿದರು.

11) ಎಲ್.ಐ.ಸಿ.ಕಾಲೋನಿ ಹಾಲಿನ ಮಳಿಗೆ ಪಕ್ಕ ಇರುವ transformer ಸುತ್ತಾ ಬೆಳೆದಿರುವ ಗಿಡಗಳನ್ನು ತೆರೆವುಗೋಳಿಸಿಕೊಡುವಂತೆ ಶ್ರೀ ಬಾಬುರಾವ್ ರವರು ಕೋರಿದರು. (ಕ್ರಮ ಸ.ಅ ಕಾಮಗಾರಿ ಇಲಾಖೆ).

12) ಮತದಾರರ ಗುರುತಿನ ಪತ್ರವನ್ನು ಪಡೆಯುವ ಬಗ್ಗೆ ಸಭೆಗೆ ಶ್ರೀಮತಿ ಕಾಳಮ್ಮರವರು ಕೋರಿದರು (ಕ್ರಮ : ಕಂ.ಪ ).

**ನಿರ್ಣಯ**:- ಈ ವಿಷಯಕ್ಕೆ ಸಮಿತಿಯು ಒಪ್ಪಿಗೆ ತಿಳಿಸಿರುತ್ತಾರೆ. ವಾರ್ಡ್ ಸಮೀತಿಯ ಮಾರ್ಪಿಡಿತ ಮೇಲೆ ಕಾಣಿಸಿರುವ ಎಲ್ಲಾ ವಿಷಯಗಳನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಸೂಚಿಸಿದರು. ವಾರ್ಡ್ ಸಮಿತಿಯ ಅಧ್ಯಕರು ಸದಸ್ಯರುಗಳಿಗೆ ಹಾಗೂ ಪಾಲಿಕೆ ಅಧಿಕಾರಿಗಳಿಗೆ ವಂದಾನಾರ್ಪಣೆ ತಿಳಿಸುತ್ತಾ ದಿ: 20.07.2021ರಂದು ಬೆಳ್ಳಗೆ 11.00ಗಂಟೆಗೆ ಮತ್ತೆ ಸಭೆ ಸೇರಲು ಹಾಗೂ ಆ ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಸಭೆ ಹಾಜರಾಗುವಂತೆ, ಪತ್ರ ಕಳುಹಿಸುವಂತೆ ತಿಳಿಸಿದರು .

**ಕಾರ್ಯದರ್ಶಿ ಮತ್ತು ಸಂಚಾಲಕರು**
**ಹೆಸರು: ವಿ. ಚಂದ್ರಶೇಖರ್**
**ಸಹಾಯಕ ಅಭಿಯಂತರರು**